N. E. S. and C. D. Blocks

*Q.—118. Sri H. C. LINGA REDDY (Malur).—

Will the Minister for Development and Co-operation be pleased to state :—

(*a*) when all the taluks were covered with N. E. S. and C. D. Blocks in the State ;

(*b*) when Panchayathi Raj was introduced in the State ;

(*c*) its impact on agricultural production in the State ?

A.—Sri P. M. NADGOUDA (Minister for Development and Co-operation).—

(*a*) 1963-64.

(*b*) 1-11-1959.

(*c*) Good and encouraging.

Sri H. C. LINGA REDDY.—May I know whether any evaluation organisation was set up and consulted before arriving at this conclusion ?

† Sri P. M. NADGOUDA.—Yes. ಸರಕಾರದವರು ಇವ್ಯಾಲ್ಯುಯೇಷನ್ ಎಷ್ಟಿ ಮೇಟು ಮಾಡಿದ ಮೇಲೆ ಉತ್ತರ ಕೊಟ್ಟಿದೆ.

Sri H. C. LINGA REDDY.—May I know when exactly elections were held to the Taluk Boards and when the Government propose to hold elections next ?

Sri P. M. NADGOUDA.—That does not arise out of this question.

ಶ್ರೀ ಎನ್. ಚಿಕ್ಕೇಗೌಡ.—ಮಿತವ್ಯಯ ಮಾಡಬೇಕೆಂದು ಎನ್. ಇ. ಎನ್. ಮತ್ತು ಸಿ. ಡಿ. ಬ್ಲಾಕ್ಸ್ ತೆಗೆದುಹಾಕಬೇಕು ಎಂದು ತೀರ್ಮಾನವಾಗಿದೆ ಇದು ನಿಜವೇ ?

ಶ್ರೀ ಪಿ. ಎಂ. ನಾಡಗೌಡ.—ಇದು ಸರಕಾರದ ತೀವ್ರ ಗಮನದಲ್ಲಿದೆ. ಇನ್ನೂ ಠರಾವು ಆಗಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್, ಕೋ-ಆಪರೇಷನ್ ಎಕ್ಸ್‌ಟೆನ್‌ಷನ್ ಆಫೀಸರ್ ಇವರು ತಾಲ್ಲೂಕ್ ಬಿ. ಡಿ. ಓ. ಅವರ ಅಧೀನಕ್ಕೆ ಒಳಪಟ್ಟಿದ್ದಾರೆ. ಇದರಿಂದ ಸಂಬಂಧಪಟ್ಟ ಅಡಳಿತದಲ್ಲಿ ಬಿಗಿ ಇಲ್ಲ ಅಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಇದು ಸರಕಾರದ ಗಮನಕ್ಕೆ ಬಂದಿಲ್ಲ. ಸೇವಾ ಸಮೀಕರಣದಿಂದ ಸಹಕಾರ ಜೆನ್ನಾಗಿ ಸಿಕ್ಕು ಕೆಲಸ ಜೆನ್ನಾಗಿ ಆಗುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ.—ಜಿಲ್ಲಾ ಪರಿಷತ್ತು ಬಂದ ಮೇಲೆ ತಾಲ್ಲೂಕು ಬೋರ್ಡ್ ಅಬಾಲಿಷ್ ಮಾಡುತ್ತೀರಾ ? ಈ ಬಗ್ಗೆ ಕಾರ್ಯ ನೀತಿ ಏನು ಎಂಬುದನ್ನು ಸ್ಪಷ್ಟ ಪಡಿಸುತ್ತೀರಾ ? ಈ ವಿಚಾರದಲ್ಲಿ ಕೇರಳ ಸರಕಾರ ತೆಗೆದುಕೊಂಡ ತೀರ್ಮಾನ ನಿಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಇದರಲ್ಲಿ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಸಿದ್ದಯ್ಯ ಕಾತೀಪುರ.—ಈ ಯೋಜನೆಯ ಎರಡನೇ ಸ್ಟೇಜಿಗೆ ಹಣ ಸಾಲದು. ಹೆಚ್ಚು ಹಣ ಒದಗಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಸ್ಪಿರ್ ಓವರ್ ವರ್ಕ್ ಅಷ್ಟೇ ಮಾಡಬೇಕು ಎಂದು ಕೇಂದ್ರ ಸರಕಾರದ ಆದೇಶ ಇದೆ. ಆದುದರಿಂದ ನಮ್ಮ ಸರಕಾರ ಹಣ ಹೆಚ್ಚಿಗೆ ಕೊಡಲು ಆಗುವುದಿಲ್ಲ.

ಶ್ರೀ ಪಿ. ಕೆ. ರಾಜಯ್ಯಶೆಟ್ಟಿ.—ಇಡೀ ರಾಜ್ಯದಲ್ಲಿ ಎಲ್ಲ ತಾಲ್ಲೂಕುಗಳಲ್ಲಿಯೂ ಇವು ಪೂರ್ತಿಯಾಗಿವೆ ಎಂದು ಹೇಳಿದ್ದಾರೆ. ಮೊದಲನೆ ಸ್ಟೇಜ್ ಮುಗಿದಿರುವುದು ಎಷ್ಟು, ಎರಡನೇ ಸ್ಟೇಜ್ ಮುಗಿದಿರುವುದು ಎಷ್ಟು ಎಂದು ಹೇಳುತ್ತಾರೆಯೇ ?

ಶ್ರೀ ಪಿ. ಎಂ. ನಾಡಗೌಡ.—ಮೊದಲನೆ ಸ್ಟೇಜ್‌ನಲ್ಲಿ 119, ಎರಡನೆ ಸ್ಟೇಜಿನಲ್ಲಿ 79, ಪೋಸ್ಟ್ ಸ್ಟೇಜ್‌ನಲ್ಲಿ 69.

ಶ್ರೀ ಎ. ಆರ್. ಪಂಚಗಾವಿ.—ಸೋಷಿಯಲ್ ಎಜುಕೇಷನ್ ಎಕ್ಸ್‌ಟೆನ್‌ಷನ್ ಆಫೀಸರ್, ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರ್ ಇವರುಗಳಿಗೆ ತಮ್ಮ ಖಾತೆಯ ಮಾಹಿತಿ ಇಲ್ಲದ್ದರಿಂದ ಎನ್. ಇ. ಎಸ್. ಮತ್ತು ಸಿ. ಡಿ. ಬ್ಲಾಕುಗಳಲ್ಲಿ ಬಹಳಷ್ಟು ಹಣ ಅಪವ್ಯಯವಾಗುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಐ. ಸೋಮಶೇಖರಪ್ಪ.—ಪೋಸ್ಟ್ ಸ್ಟೇಜ್ ಬ್ಲಾಕಿಗೆ 47 ಸಾವಿರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಈ ಹಣ ವೇಸ್ಟ್ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಅದರ ಉಪಯೋಗ ಚೆನ್ನಾಗಿ ಆಗುತ್ತಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ಹೊರತು ವೇಷ್ಟ್ ಆಗುತ್ತಿದೆ ಎಂದು ಬಂದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪೋಸ್ಟ್ ಸ್ಟೇಜ್ ಬ್ಲಾಕ್‌ಗಳಲ್ಲಿ ಹಣ ಕೊಡುವುದಿಲ್ಲ. ಸಿಬ್ಬಂದಿ ಹಿಂದಿನದೇ ಇದೆ. ಅವರಿಗೆ ಏನು ಕೆಲಸ ಹಚ್ಚಿದ್ದೀರಿ ?

ಶ್ರೀ ಪಿ. ಎಂ. ನಾಡಗೌಡ.—ಪೋಸ್ಟ್ ಸ್ಟೇಜ್ ಬ್ಲಾಕಿನಲ್ಲಿ ಅವರಿಗೆ ಕೆಲಸ ಬೇಸಾಯದ ಉತ್ಪನ್ನದ ಸಲುವಾಗಿ ಮಾಡುತ್ತಿದ್ದಾರೆ, ಸಹಕಾರದ ಕೆಲಸ ಮಾಡುತ್ತಿದ್ದಾರೆ, ಬಾವಿ ವಗ್ಗೆರೆ ಕೆಲಸ ಮಾಡುತ್ತಿದ್ದಾರೆ, ಸ್ಪಿಲ್ ಓವರ್ ಕೆಲಸ ಏನೇನಿದೆ ಅವನ್ನೆಲ್ಲಾ ಮಾಡುತ್ತಿದ್ದಾರೆ. ಪೋಸ್ಟ್ ಸ್ಟೇಜ್ ಬ್ಲಾಕುಗಳನ್ನು ಸರ್ಕಾರದವರು ಟ್ಯಾಂಪರ್ ಮಾಡಿದರೆ ಹಿಂದೆ 10-15 ಪರ್ಸೆಂಟಗಳಿಂದ ಮಾಡಿದಂಥ ಕೆಲಸಗಳು ಪೂರ್ಣವಾಗಿ ನೀರಿನಲ್ಲಿ ಕಟ್ಟಿಗೆದು ಹೋಗುವಂಥ ಸಂಭವವಿದೆ. ಆದ್ದರಿಂದ ಇವು ಬೇಕಾಗುತ್ತವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಮದ್ರಾಸ್ ಪ್ರಾಂತದಲ್ಲಿ ತಾಲ್ಲೂಕು ಬೋರ್ಡುಗಳಿಂದ ನಿರೀಕ್ಷಣೆ ಮಾಡಿದ್ದ ಪ್ರತಿಫಲ ಬಾರದೆ ಇರುವುದರಿಂದ ಅವುಗಳನ್ನು ಕಿತ್ತು ಹಾಕಬೇಕೆಂದು ತೀರ್ಮಾನ ಮಾಡಿದ್ದಾರೆ. ನಮ್ಮ ತಾಲ್ಲೂಕು ಬೋರ್ಡುಗಳಲ್ಲಿಯೂ ಪ್ರಯೋಜನಕ್ಕಿಂತ ಹೆಚ್ಚಾಗಿ ದುಡ್ಡು ವ್ಯಯವಾಗುತ್ತಿರುವುದರಿಂದ ನಮ್ಮ ಸರ್ಕಾರದವರು ಬಿಟ್ಟತನದ ಹೆಜ್ಜೆಯನ್ನಿಟ್ಟು ತಾಲ್ಲೂಕು ಬೋರ್ಡುಗಳನ್ನು ವಜಾ ಮಾಡಿ ರೆವೆನ್ಯೂ ಅಧಿಕಾರಿಗಳಿಗೆ ಆ ಕೆಲಸವನ್ನು ವಹಿಸುವ ವಿಚಾರ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಅಭಿವೃದ್ಧಿ ಯೋಜನೆಯೊಳಗೆ ಜನತೆಯನ್ನು ಅಲ್ಲಿ ಅಪೋಸಿಯೇಟ್ ಮಾಡಿದರೆ ದೇಶಕ್ಕೆ ಮತ್ತು ಜನತೆಗೆ ಹೆಚ್ಚು ಪ್ರತಿಫಲ ಬರುತ್ತದೆ, ಒಕ್ಕಲುತನ ಚೆನ್ನಾಗಿ ಆಗುತ್ತದೆ ಎನ್ನುವುದು ಸರ್ಕಾರದ ಅಭಿಪ್ರಾಯವಾಗಿದೆ.

ಶ್ರೀ ಎಸ್. ಎಸ್. ಅರಕೇರಿ.—ಮೈಸೂರು ಸರ್ಕಾರ ಸಿ. ಡಿ. ಬ್ಲಾಕುಗಳನ್ನು ತೆಗೆದು ಹಾಕಬೇಕೆಂದು ನಿರ್ಣಯ ಮಾಡಿದೆ ಎಂದು ಪತ್ರಿಕೆಗಳಲ್ಲಿ ಬಂದಿರುವುದು ನಿಜವೇ ?

ಶ್ರೀ ಪಿ. ಎಂ. ನಾಡಗೌಡ.—ಅದು ಬರೋಬರಿ ಅಲ್ಲ.

Sri S. D. KOTHAWALE.—Will the Hon'ble Minister state whether they have taken a decision to retrench any C. D. and N.E.S. staff and if so, the reason for such decision.

Sri P. M. NADGOUDA.—Government has not taken a decision as such. It is under the active consideration of the Government. After the decision is taken, Government will convey the decision taken to the hon'ble Members.

ಶ್ರೀ ಡಿ. ಎಸ್. ನಾಡಕರ್ಣಿ.—ಎನ್. ಇ. ಎಸ್. ಮತ್ತು ಸಿ. ಡಿ. ಬ್ಲಾಕುಗಳಲ್ಲಿ ಎಕ್ಸ್‌ಟೆನ್‌ಷನ್ ಆಫೀಸರುಗಳನ್ನು ಕೊಟ್ಟಿದ್ದಾರಲ್ಲ, ಅವರು ಆ ಖಾತೆಗಳಲ್ಲಿ ಬೇಡವಾದವರು ಮತ್ತು ನಾರಾಯಖ್ ಆದವರಾದ್ದರಿಂದ ಕೆಲಸಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಅದು ಬರೋಬರಿ ಮಾಹಿತಿ ಅಲ್ಲ. ಈ ಬ್ಲಾಕುಗಳೊಳಗೆ ತಾಲ್ಲೂಕಾ ಡೆವಲಪ್‌ಮೆಂಟ್ ಬೋರ್ಡಿನ ಅಭಿಪ್ರಾಯಗಳನ್ನು ತೆಗೆದುಕೊಂಡು ಅವರಿಗೆ ಹೊಂದಾಣಿಕೆಯಾಗುವಂಥ ಅಧಿಕಾರಿಗಳನ್ನು ಹಾಕುತ್ತೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅನೇಕ ಸಮಿತಿಗಳನ್ನು ಮಾಡಿ, ಆ ಸಮಿತಿಗಳಿಂದ ಬೇತ ಉದ್ಧಾರವಾಯಿತು ಎಂದು ತಿಳಿದುಕೊಂಡಿದ್ದೀರಿ. ಸಿ. ಡಿ. ಬ್ಲಾಕುಗಳು ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಗಳ ವಿಚಾರದಲ್ಲಿ ರಿಯಲಿಸ್ಟಿಕ್ ಆಗಿ ಇರುವ ಪ್ರಾಬ್ಲಂಗಳನ್ನು ಅಪ್ರೋಚ್ ಮಾಡುವುದಕ್ಕೆ ದೇವರು ನಿಮಗೆ ಸದ್ಬುದ್ಧಿ ಕೊಡಲಿ ಎಂದು ಹೇಳೋಣವೇ, ಸ್ವಾಮಿ ?

Mr. SPEAKER.—It is disallowed.

ಶ್ರೀ ಚಿಕ್ಕೇಗೌಡ.—ಮುದರಾಸು ಪ್ರಾಂತದಲ್ಲಿ ತಾಲ್ಲೂಕುಬೋರ್ಡುಗಳನ್ನು ತೆಗೆದಿದ್ದಾರೆಂದು ಸದಸ್ಯರೊಬ್ಬರು ಹೇಳಿದ್ದು ನಿಜವೇ ?

ಶ್ರೀ ಪಿ. ಎಂ. ನಾಡಗೌಡ.—ಅದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಚಿಕ್ಕೇಗೌಡ.—ಕೊಂಡಜ್ಜಿ ಬಸಪ್ಪ ಕಮಿಟಿಯವರ ಶಿಫಾರಸಿನಂತೆ ಪಂಚಾಯಿತಿ ರಾಜ್ಯದ ಬಿಲ್ಲನ್ನು ತರಲು ಯೋಜನೆ ಮಾಡಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ಆ ವಿಚಾರವನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ.

ಶ್ರೀ ಎಸ್. ಪುಟ್ಟಸ್ವಾಮಿ.—ಹಿಂದೆ ತಾಲ್ಲೂಕು ಬೋರ್ಡಿನಲ್ಲಿದ್ದಾಗ ಒಬ್ಬ ಅಧಿಕಾರಿಗಳು ಆ ಕೆಲಸವನ್ನು ನೋಡಿಕೊಳ್ಳುತ್ತಿದ್ದರು. ಈಗ ತಾಲ್ಲೂಕು ಬೋರ್ಡಿನಲ್ಲಿ ಕಂಬ ಕಂಬಕ್ಕೆ ಒಬ್ಬ ಅಧಿಕಾರಿಗಳಿದ್ದಾರೆ. ಅವರಿಗೇನೂ ಕೆಲಸವಿಲ್ಲದೆ ಹಾಯಾಗಿ 30 ದಿವಸ ಎಣಿಸಿ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಈ ಇಲಾಖೆಯನ್ನು ತೆಗೆದು ಹಿಂದಿದ್ದಹಾಗೆ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಆಗುವುದಿಲ್ಲ, ಅಲ್ಲಿ ಕೆಲಸ ಕಾರ್ಯ ಸಾಕಷ್ಟಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ನೋಡಿದಂತೆ ನಮ್ಮ ಕಡೆ ಬ್ಲಾಕಿನಲ್ಲಿ ಇರುವ ಅಧಿಕಾರಿಗಳಿಗೆ ಸಾಕಷ್ಟು ಕೆಲಸವಿಲ್ಲ, ಕೆಲಸಮಾಡಲು ಹಣವಿಲ್ಲ. ಆದ್ದರಿಂದ ಆ ಅಧಿಕಾರಿಗಳನ್ನು ಬೇರೆ ಕಡೆಗೆ ಹಾಕಿ ಕೆಲಸ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ನಮಗೆ ಬಂದಿರುವ ವರದಿ ಪ್ರಕಾರ ಅಲ್ಲಿ ಸಾಕಷ್ಟು ಕೆಲಸ ಇದೆ. ಅಲ್ಲಿನವರನ್ನು ತೆಗೆದರೆ ಬಹಳ ಕಠಿನವಾಗಬಹುದು.

ಶ್ರೀ ಎಸ್. ಶಿವಪ್ಪ.—ಪಂಚಾಯಿತಿ ರಾಜ್ಯ ಬಂದಮೇಲೆ ಹಳ್ಳಿಗಳಲ್ಲಿ ಒಗ್ಗಟ್ಟಿಗೆ ಬದಲು ಪಾರ್ಟಿಗಳಾಗಿ ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಬಂದಿಲ್ಲ. ಒಗ್ಗಟ್ಟಿಗೆ ಅದರಿಂದ ಅನುಕೂಲವಾಗಬಹುದು ಎಂಬುದು ನಮ್ಮ ಭಾವನೆ.

Mr. SPEAKER.—Question Hour is over. Now Short Notice Question No. 40.

SHORT NOTICE QUESTION

Priority to Major and Medium Irrigation Projects

Q.—40. Sri H. C. LINGA REDDY (Malur).—

Will the Minister for Public Works be pleased to state :—

(*a*) whether it is a fact that the Government has decided to give priority to Major and Medium Irrigation Projects in preference to Minor Irrigation works from this year onwards ;

(*b*) if so, the reasons thereof ;

(*c*) whether it is a fact that minor irrigation works would yield quick results at lower costs ;

(*d*) the policy of the Government as regards minor irrigation works in the annual and fourth plan of the State ?